| PUBLICATION NAME : | Sanje Prabha |
|---|---|
| DATE : | 01/03/2025 |
| PAGE : | 02 |



# ಇಡಿಐಐನಿಂದ ಉದ್ಯಮಶೀಲತೆಯ 16ನೇ ದ್ವೈವಾರ್ಷಿಕ ಸಮ್ಮೇಳನ ಆಯೋಜನೆ

ಅಹಮದಾಬಾದ್: ಅಹಮದಾಬಾದ್‌ನ ಆಂತ್ರಪ್ರಿನ್ಯೂರ್ಶಿಪ್ ಡೆವಲಪ್ ಮೆಂಟ್ ಇನ್ಸಿಟ್ಯೂಟ್ ಆಫ್ ಇಂಡಿಯಾ (ಇಡಿಐಐ)ನ 16ನೇ ದ್ವೈವಾರ್ಷಿಕ ಸಮ್ಮೇಳನ (3 ದಿನಗಳು) ಫೆಬ್ರವರಿ 26ರಂದು ಸಂಸ್ಥೆಯ ಕ್ಯಾಂಪಸ್ ನಲ್ಲಿ ಪ್ರಾರಂಭವಾಯಿತು. 'ಉದ್ಯಮಶೀಲತೆ' ಕುರಿತಾದ ಈ ಮೂರು ದಿನಗಳ ಸಮ್ಮೇಳನವು ಫೆ.28ಕ್ಕೆ ಸಮಾರೋಪಗೊಂಡಿತು. ಈ ಸಮ್ಮೇಳನವು ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಅಭ್ಯಾಸಿಗಳಿಗೆ ಉದ್ಯಮಶೀಲತೆಯ ಅಭಿವೃದ್ಧಿಯ ವಿವಿಧ ಕ್ಷೇತ್ರಗಳ ಕುರಿತಾದ ಅವರ ಸಂಶೋಧನೆಯ ಅಧ್ಯಯನಗಳು ಮತ್ತು ಫಲಿತಾಂಶಗಳನ್ನು ಹಂಚಿಕೊಳ್ಳಲು ವೇದಿಕೆಯಾಗಿತ್ತು. ಇಡಿಐಐ 1994ರಿಂದಲೂ ಈ ದ್ವೈವಾರ್ಷಿಕ ಸಮ್ಮೇಳನವನ್ನು ಆಯೋಜಿಸುತ್ತಿದೆ.




ಈ ಸಮ್ಮೇಳನದ ಸಂದರ್ಭದಲ್ಲಿ ಉದ್ಯಮಶೀಲತೆಯ ತತ್ವ ಮತ್ತು ರೂಢಿ, ಉದ್ಯಮಶೀಲತೆಯ ಶಿಕ್ಷಣ, ಉದ್ಯಮಶೀಲತೆಯ ವ್ಯವಸ್ಥೆ, ಮನಃಶಾಸ್ತ್ರ ಮತ್ತು ಉದ್ಯಮಶೀಲತೆ, ಎಂ.ಎಸ್.ಎಂ.ಇ.ಉದ್ಯಮಶೀಲತೆ, ತಂತ್ರಜ್ಞಾನ ಮತ್ತು ಡಿಜಿಟಲ್ ಉದ್ಯಮಶೀಲತೆ, ಸ್ಟಾರ್ಟಪ್ ಮತ್ತು ಆವಿಷ್ಕಾರ, ಹಸಿರು ಮತ್ತು ಸುಸ್ಥಿರ ಉದ್ಯಮಶೀಲತೆ, ಸಾಮಾಜಿಕ ಉದ್ಯಮಶೀಲತೆ, ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಾಧಾರಿತ ಉದ್ಯಮಶೀಲತೆ, ಮಹಿಳಾ ಉದ್ಯಮಶೀಲತೆ, ಗ್ರಾಮೀಣ ಉದ್ಯಮಶೀಲತೆ ಮತ್ತು ಹೊಸತನದ ಉದ್ಯಮಶೀಲತೆ ಮತ್ತು ಹೊಸ ಉದ್ಯಮ ಸೃಷ್ಟಿ ಹಾಗೂ ಕುಟುಂಬ ವ್ಯವಹಾರಗಳ ಕುರಿತಾದ 9 ದೇಶಗಳ ವಿದ್ವಾಂಸದಿಂದ 148 ಸಂಶೋಧನಾ ಪ್ರಬಂಧಗಳು ಮತ್ತು ಅಧ್ಯಯನಗಳನ್ನು ಮಂಡಿಸಲಾಯಿತು.